

ಗಾಯಗೊಂಡು ನೆಲಕ್ಕೆ ಉರುಳಿ ಬಿದ್ದಿದ್ದ ಬಾವಲಿ

ಮುಂಗೈಯಿಂದ ಹಿಡಿದುಕೊಂಡು ಬಾವಲಿ ಎರಡನೇ ಮುಂಗೈಯನ್ನು ಮುಂದು ಮಾಡಿ ಕಟ್ಟಿಗೆ ಹಿಡಿಯುವಾಗ ಹೊಟ್ಟೆಯ ಭಾಗವನ್ನು ಇಡಿಯಾಗಿ ತೆರೆಯಿತು. ಸುಮಾರು ಒಂದು ಅಡಿಗೂ ಹೆಚ್ಚು ಚಾಚಿಕೊಂಡ ರೆಕ್ಕೆಯ ಕೆಳಗೆ ಹೊಟ್ಟೆಯ ಭಾಗದಲ್ಲಿ ಮರಿಯೊಂದು ಬೆಚ್ಚಗೆ ಅವುಚಿಕೊಂಡಿತ್ತು!

'ಇದೇನೋ ಮೂರ್ತಿ, ಮರಿ ಕೂಡಾ ಇದೆಯಲ್ಲ' ಎಂದೆ. ಅಲ್ಲಿಯವರೆಗೆ ಬಾವಲಿಯನ್ನು ಭೂತ, ಅಪಶಕುನ ಎಂದೆಲ್ಲ ಜರಿಯುತ್ತಿದ್ದ ಶೋಭಮ್ಮ 'ಅಯ್ಯೋ ದೇವ್ರೆ, ನನ್ ಕೈಲಿ ನೋಡಕ್ಕಾಗಲ್ಲಪ್ಪ, ಮರಿಗೇನಾದ್ರೂ ಏಟು ಬಿದ್ದದಾ ನೋಡಿ ಸಾರ್' ಎಂದು ತಾಯಿ ಮಮತೆ ತೋರಿದಳು. ಹಾಗೇನೂ ಆಗಿರಲಿಲ್ಲ. ಕಟ್ಟಿಗೆಗೆ ನೇತಾಡುತ್ತಿದ್ದ ತಾಯಿ ಬಾವಲಿ ಕಣ್ಣು ತೆರೆದು ಸ್ವಲ್ಪ ಹೊತ್ತು ಸುತ್ತ ನಿರುಕಿಸಿ ಎರಡೂ ರೆಕ್ಕೆಗಳಿಂದ ಮರಿಯನ್ನು ಸುತ್ತಿಹಿಡಿದು ಕಟ್ಟಿಗೆಗೆ ನೇತಾಡತೊಡಗಿತು. 'ಈಗೇನ್ಮಾಡದು ಸಾರ್' ಎಂದ ಮೂರ್ತಿ, ತನಗೆ ಗಿಡಗಳಿಗೆ ಗೊಬ್ಬರ ನೀಡುವ ಕೆಲಸದ ತುರ್ತಿದೆ ಎಂದು ಹೇಳಿ ನನ್ನ ಮುಖ ನೋಡಿದ. 'ಈಗ ಹಗಲು, ಬೆಳಕು ತುಂಬಾ ಇದೆ. ಅದಕ್ಕೆ ಶಕ್ತಿ ಬರೋದು ಕತ್ತಲಾದ ಮೇಲೇನೆ, ಅಲ್ಲಿಯವರೆಗೆ ಹತ್ತಿರದ ಪೊದೆಯ ಹತ್ತಿರ ಕತ್ತಲಿರೋ ಕಡೆ ಬಿಡೋಣ' ಎಂದೆ.

'ಬನ್ನೀ ಸಾರ್' ಎಂದವನೇ, ಸರಸರನೇ ನಡೆದು ಪಾಥ್‌ವೇ ಪಕ್ಕದಲ್ಲಿದ್ದ ಬಾಳೆಯ ಗಿಡಗಳ ಕೊಂಬೆಗೆ ತಾಕುವಂತೆ ಕಟ್ಟಿಗೆ ಹಿಡಿದ. ಸರ್ರನೇ ಕಟ್ಟಿಗೆಯಿಂದ ತುಸು ದೂರ ಹಾರಿದ ಬಾವಲಿ ಮರಿಯ ಸಮೇತ ಬಾಟಲ್‌ಪಾಮ್ ಗಿಡದ ಬುಡದ ಬಳಿ ಇದ್ದ ಕಲ್ಲುಗಳ ನಡುವೆ ಜಾಗ ಮಾಡಿಕೊಂಡು ಸುಮ್ಮನಾಯಿತು.

## ಕುತೂಹಲದ ಕಣ್ಣು ಕಿವಿಗಳು

ಅಷ್ಟರಲ್ಲೇ ನಾವೇನೊ ಭಾನಗಡಿ ಮಾಡುತ್ತಿದ್ದೇವೆ ಎಂದು ಅಂದಾಜಿಸಿದ ಶಾಲೆಯ ಹುಡುಗರು 'ಏ ಅಲ್ನೋಡ್ರೊ ಬಾವಲಿ, ಎಷ್ಟು ಕ್ಯೂಟಾಗಿದೆ' ಎಂದು ಗದ್ದಲ ಎಬ್ಬಿಸಿದರು. ಅಷ್ಟರಲ್ಲೇ ಒಬ್ಬ 'ಕ್ಯೂಟ್ ಗೀಟ್ ಏನೂ ಇಲ್ಲ, ಇದೇ ನಮ್ಮ ಪಾಲಿನ ವಿಲನ್, ಇದರಿಂದಾನೆ ಅಲ್ವ ಕೋವಿಡ್ ರೋಗ ಹಬ್ಬಿದ್ದು, ನಮಗೆ ಎರಡು ವರ್ಷ ಕ್ಲಾಸೇ ನಡೀಲಿಲ್ಲ' ಎಂದು ಅಲವತ್ತುಕೊಂಡ. 'ಹೋಗ್ಲಿ ಬಿಡೋ, ಕೋವಿಡ್ ಬರೋಕಿಂತ ಮುಂಚೆ ನಮ್ಮಪ್ಪ ನನಿಗೆ ಅವರ ಮೊಬೈಲ್ ಫೋನ್ ಮುಟ್ಟೋಕೂ ಬಿಡ್ತಿರಲಿಲ್ಲ, ಯಾವಾಗ ಸ್ಕೂಲ್‌ನವರು ಆನ್‌ಲೈನ್ ಕ್ಲಾಸ್ ಅಂದ್ರೋ, ನಂಗೊಂದು ಒಳ್ಳೇ ಫೋನ್ ಸಿಕ್ತಪ್ಪಾ, ಥ್ಯಾಂಕ್ಸ್ ಮೈ ಡಿಯರ್ ಬಾವಲಿ' ಎಂದ. 'ಇವನೆಲ್ಲೊ ಮೆಂಟ್ಲು ಕಣ್ರೊ' ಎಂದು ಇನ್ನಿಬ್ಬರು ಕೂಗಿದರು.

'ಇಲ್ಲಿ ಗಲಾಟೆ ಮಾಡಬೇಡಿ, ಶಬ್ದ ಮಾಡದೆ ನೋಡಿ ಕ್ಲಾಸಿಗೆ ಹೋಗಿ' ಎಂದೆ. ಅಷ್ಟರಲ್ಲೇ ಒಬ್ಬಳು ವಿದ್ಯಾರ್ಥಿನಿ 'ಸರ್ ಬಾವಲಿಗೆ ಹಗಲು ಕಣ್ಣು ಕಾಣಿಸೊಲ್ಲ ಅಂತಾರೆ ನಿಜಾನ?' ಎಂದು ಕೇಳಿದಳು. ಮತ್ತೊಬ್ಬ ವಿದ್ಯಾರ್ಥಿ, 'ಇವು ಹಾರುವಾಗ ಅಲ್ಟ್ರಾಸಾನಿಕ್ ತರಂಗಗಳನ್ನು ಹೊಮ್ಮಿಸುತ್ತಾ ದಾರಿ ಕಂಡುಕೊಳ್ಳುತ್ತವೆಯಂತೆ ಹೌದಾ?' ಎಂದು ಪ್ರಶ್ನಿಸಿದ. ಅವರ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದಾಗ ಪೊಟರೆಯಲ್ಲಿದ್ದ ಬಾವಲಿ ಸಟ್ಟನೆ ಹಾರಿ ಹತ್ತಿರದ ಚಿಕ್ಕ ಗಿಡವೊಂದಕ್ಕೆ ಉಲ್ಟಾ ನೇತು ಹಾಕಿಕೊಂಡು ಕಣ್ಣು ಮುಚ್ಚಿ ನಿದ್ದೆ ಹೋದಂತೆ ನಟಿಸತೊಡಗಿತು. ಆಗ ವಿದ್ಯಾರ್ಥಿಗಳು ಲಂಚ್ ಬ್ರೇಕ್‌ನಲ್ಲಿ ಮತ್ತೆ ಬರೋಣ ಬನ್ರೊ ಎಂದವರೇ ಪಿಟಿ ಮಾಸ್ಟರ್ ಊದಿದ ಪೀಪಿಯ ಸದ್ದಿಗೆ ಕಿವಿಗೊಟ್ಟು ಆಟದ ಮೈದಾನದ ಕಡೆ ನುಗ್ಗಿದರು.

## ಬಾವಲಿ ವಿಶೇಷ

ಪ್ರಪಂಚದಾದ್ಯಂತ 1200ರಷ್ಟು ಬಾವಲಿ ಪ್ರಭೇದಗಳಿವೆ. 'ಕೈರಾಪ್ಟರಾ' ಗುಂಪಿಗೆ ಸೇರಿದ ಬಾವಲಿಗಳನ್ನು ಅವುಗಳ ಗಾತ್ರಕ್ಕನುಗುಣವಾಗಿ ಮೆಗಾ ಮತ್ತು ಮೈಕ್ರೊ ಬ್ಯಾಟ್ ಎಂದು ವಿಂಗಡಿಸಲಾಗಿದೆ. ಹೆಬ್ಬಾವಲಿಗಳನ್ನು 'ಹಣ್ಣಿನ ಬಾವಲಿ' ಮತ್ತು ಕಿರುಬಾವಲಿಗಳನ್ನು 'ಕೀಟ ಬಾವಲಿ' ಎನ್ನುತ್ತಾರೆ. ರೈತನ ಮಿತ್ರ, ರೋಗ ಹಬ್ಬಿಸುವ ಮೂಲ, ಅಪಶಕುನ, ಉತ್ತಮ ಆಹಾರ ಎಂದೆಲ್ಲ ಕರೆಸಿಕೊಳ್ಳುವ ಬಾವಲಿಗಳನ್ನು ಬೇಟೆಯಾಡಿ ಕೊಲ್ಲುವುದು



ಬಾವಲಿ ಮರಿಗೆ ಅಮ್ಮನ ಅಪ್ಪುಗೆ



ಗಾಬರಿಯಿಂದ ಕಲ್ಲುಗಳ ನಡುವೆ ಸೇರಿದ ಬಾವಲಿ